ಖಂಡಿಸತಕ್ಕಂತಹ ಸ್ಥಿತಿ ಇದೆ ಮತ್ತು ಇಂತಹ ಘಟನೆಗಳನ್ನು ನಾವು ಖಂಡನೆ ಮಾಡಲೇಬೇಕು. ಒಬ್ಬ ಪಾರ್ಲಿಮೆಂಟ್ ಸದಸ್ಯನಿಗೆ ರಕ್ಷಣೆ ಇಲ್ಲವೆಂದರೆ ಒಂದು ದೊಡ್ಡ ಅನಾಹುತವನ್ನು ನಾವೇ ತಂದುಕೊಳ್ಳುತ್ತಿದ್ದೇವೆ ಎಂಬುದಾಗುತ್ತದೆ. ಅದಕ್ಕೆ, ನಾನು ದಯವಿಟ್ಟು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ. ತಕ್ಷಣ ಇದರ ವ್ಯವಸ್ಥೆಯಾಗಬೇಕು, ಮತ್ತೆ ಯಾರು ಕಾನೂನನ್ನು ಕೈಗೆತ್ತಿಕೊಳ್ಳುತ್ತಾರೋ ಅವರನ್ನು ಶಿಕ್ಷೆಗೆ ಗುರಿಪಡಿಸಬೇಕು, ಅವರ ಮೇಲೆ ಕಣ್ಣಿಟ್ಟು ಇಂತಹ ಘಟನೆಗಳು ನಡೆಯದಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ, ಇದಕ್ಕೆ ಕೌಂಟರ್ ಆಗಿ ಬೇರೆಯವರು ಮಾಡುವುದಕ್ಕೆ ಆರಂಭ ಮಾಡುತ್ತಾರೆ, ಅದು ನಿಮಗೆ ಬೇಕೆಂದರೆ ಆ ವಿಚಾರ ಬೇರೆ. ದಯವಿಟ್ಟು ಶಾಂತ ರೀತಿಯಿಂದ ಇರಬೇಕೆಂಬ ಸ್ವಇಚ್ಛೆಯಿಂದ ಇಲ್ಲಿ ವ್ಯವಸ್ಥೆಯನ್ನು ಕಾಪಾಡಿಕೊಳ್ಳಿ. ಇಲ್ಲದಿದ್ದರೆ, ನಾಳೆ ಎಲ್ಲರಿಗೂ ತೊಂದರೆಯಾಗುತ್ತದೆಂಬ ಮಾತನ್ನು ತಮ್ಮ ಮೂಲಕ ಅವರಿಗೆ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):– ಅಧ್ಯಕ್ಷರೆ, ಮಾನ್ಯ ಸಾಂಗ್ಲಿಯಾನರವರಿಗೆ ಸರ್ಕಾರ ಸೂಕ್ತ ರಕ್ಷಣೆಯನ್ನು ಕೊಡುತ್ತದೆ ಮತ್ತೆ ಯಾರು ಕಾನೂನನ್ನು ಕೈಗೆತ್ತಿಕೊಳ್ಳುತ್ತಾರೆ ಅವರ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಆದೇಶ ಮಾಡುತ್ತೇನೆ

ಅಧ್ಯಕ್ಷರು:– ಈಗ ಗಮನ ಸೆಳೆಯುವ ಸೂಚನೆಗಳು, ಮಾನ್ಯ ಡಿ.ಕೆ. ಶಿವಕುಮಾರ್ ಅವರು ಬಂದಿಲ್ಲ, ಧ್ರುವನಾರಾಯಣ್‌ರವರು ಕೇಳುವುದು.

5. ಗಮನ ಸೆಳೆಯುವ ಸೂಚನೆಗಳು

5. ವಿಷಯ: ಮೈಸೂರು ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರ ನೇಮಕಾತಿಯಲ್ಲಿ ಯು.ಜಿ.ಸಿ ನಿಯಮ ಉಲ್ಲಂಘನೆಯಾಗಿರುವ ಬಗ್ಗೆ.

ಶ್ರೀ ಆರ್. ಧ್ರುವನಾರಾಯಣ್ (ಕೊಳ್ಳೇಗಾಲ):– ಅಧ್ಯಕ್ಷರೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸಕರು, ರೀಡರ್ ಮತ್ತು ಪ್ರೊಫೆಸರ್ ಹುದ್ದೆಗಳ ನೇಮಕಾತಿಯಲ್ಲಿ ಯು.ಜಿ.ಸಿ. ನಿಯಮ ಉಲ್ಲಂಘನೆಯಾಗಿರುವ ಬಗ್ಗೆ ಉನ್ನತ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ವಿಶ್ವೇಶ್ವರ ಹೆಗ್ಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):– ಅಧ್ಯಕ್ಷರೆ, ಮಾನ್ಯ ಉನ್ನತ ಶಿಕ್ಷಣ ಸಚಿವರು ದೆಹಲಿಯಲ್ಲಿ ನಡೆಯುತ್ತಿರುವ, ಉನ್ನತ ಶಿಕ್ಷಣ

ಸಚಿವರ ಸಮ್ಮೇಳನದಲ್ಲಿ ಭಾಗವಹಿಸಲು ಅವರು ತೆರಳಿದ್ದಾರೆ, ಅವರ ಪರವಾಗಿ ನಾನು ಈ ಹೇಳಿಕೆಯನ್ನು ನೀಡುತ್ತಿದ್ದೇನೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರ ಮತ್ತು ಪ್ರವಾಚಕರ ಹುದ್ದೆಗಳ ನೇರ ನೇಮಕಾತಿಯಲ್ಲಿ ಮೀಸಲಾತಿ ಮತ್ತು ಯುಜಿಸಿ ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ಅನುಭವ ಕಡಿಮೆ ಇರುವಂತಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವ ಬಗ್ಗೆ ಮತ್ತು ಉಪನ್ಯಾಸಕರ ಹುದ್ದೆಗಳ ನೇರ ನೇಮಕಾತಿಯಲ್ಲಿ ಮೀಸಲಾತಿ ಉಲ್ಲಂಘನೆ ಮತ್ತು ಸುಳ್ಳು ಜಾತಿ ಪತ್ರ ನೀಡಿ, ಆಯ್ಕೆಯಾಗಿರುವ ಬಗ್ಗೆ ಬಂದ ದೂರುಗಳ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ದಿನಾಂಕ: 27–12–2007 ರಂದು ಕಾರಣ ಕೇಳುವ ಸೂಚನೆ (show cause Notice) ಅನ್ನು ಹೊರಡಿಸಿ, ವಿವರವಾದ ಮಾಹಿತಿಯನ್ನು ಮೈಸೂರು ವಿಶ್ವವಿದ್ಯಾಲಯದಿಂದ ಪಡೆಯಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರ ಮತ್ತು ಪ್ರವಾಚಕರ ಹುದ್ದೆಗಳ ನೇರ ನೇಮಕಾತಿಯಲ್ಲಿ ಮೀಸಲಾತಿ ಉಲ್ಲಂಘನೆ, ಯುಜಿಸಿ ನಿಗದಿಪಡಿಸಿರುವ ವಿದ್ಯಾರ್ಹತೆ ಉಲ್ಲಂಘನೆ ಮತ್ತು ಅಂಕಗಳನ್ನು ತಾರತಮ್ಯ ಉಂಟಾಗಿದೆ ಎಂದು ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಿ, ಈ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲು ಸರ್ಕಾರವನ್ನು ಕೋರಿರುತ್ತಾರೆ ಉಪನ್ಯಾಸಕರ ನೇಮಕಾತಿಯಲ್ಲಿ ಮಿಸಲಾತಿ ಉಲ್ಲಂಘನೆ ಹಾಗೂ ಸುಳ್ಳು ಜಾತಿ ಪತ್ರ ನೀಡಿರುವ ಬಗ್ಗೆ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿರುತ್ತಾರೆ. ಪ್ರವಾಚಕರ ಮತ್ತು ಪ್ರಾಧ್ಯಾಪಕರ ಬಗ್ಗೆ ಸಮಗ್ರವಾದಂತಹ ಮಾಹಿತಿಯನ್ನು ಸಲ್ಲಿಸಿದ್ದು, ಉಪನ್ಯಾಸಕರ ಬಗ್ಗೆ ವಿವರಗಳನ್ನು ಸಲ್ಲಿಸದಿದ್ದರೆ ಮೇರೆಗೆ ಪುನಃ ಪತ್ರ ಬರೆದು, ವಿವರವಾದ ವರದಿ/ಮಾಹಿತಿಯನ್ನು ಉಪನ್ಯಾಸಕರ ಬಗ್ಗೆ ಪಡೆಯಲಾಗಿದೆ.

ರಾಜ್ಯ ಸರ್ಕಾರವು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರ ಮತ್ತು ಪ್ರವಾಚಕರ ಹುದ್ದೆಗಳ ನೇರ ನೇಮಕಾತಿಯಲ್ಲಿ ಮೀಸಲಾತಿ ಉಲ್ಲಂಘನೆ, ಯುಜಿಸಿ ನಿಗದಿಪಡಿಸಿರುವ ವಿದ್ಯಾರ್ಹತೆ ಉಲ್ಲಂಘನೆ ಮತ್ತು ಅಂಕಗಳ ನೀಡಿಕೆಯಲ್ಲಿ ತಾರತಮ್ಯ ಉಂಟಾಗಿರುವ ಬಗ್ಗೆ ಸಿಂಡಿಕೇಟ್ ಸಭೆಯು ಮಿಸಲಾತಿ ಉಲ್ಲಂಘನೆ, ಅಂಕಗಳ ನೀಡಿಕೆಯಲ್ಲಿ ತಾರತಮ್ಯ ಹಾಗೂ ಯುಜಿಸಿ ನಿಯಮಗಳನ್ನು ಉಲ್ಲಂಘಿಸಿ ಆಯ್ಕೆ ಮಾಡಿರುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿರುವುದರಿಂದ ಮತ್ತು ಉಪನ್ಯಾಸಕರ ನೇಮಕಾತಿಯ ಬಗ್ಗೆ ಸರ್ಕಾರವು ಪರಿಶೀಲನೆ ಮಾಡುತ್ತಿದ್ದು, ಈ ಬಗ್ಗೆ ಸಮಗ್ರವಾಗಿ ಪರಿಶೀಲನೆ ನಡೆಸಿ, ಶೀಘ್ರದಲ್ಲೇ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು.

ಶ್ರೀ ಆರ್. ಧ್ರುವನಾರಾಯಣ್: ಮಾನ್ಯ ಅಧ್ಯಕ್ಷರೇ, ಎರಡು ನೇಮಕಾತಿಯಾಗಿದೆ ಮೊದಲನೇ ನೇಮಕಾತಿ 25.3.2006, ಎರಡನೇ ನೇಮಕಾತಿ 19.4.2007ರಲ್ಲಾಗಿದೆ ಈ ಎರಡು ನೇಮಕಾತಿಗಳಲ್ಲಿ ವ್ಯಾಪಕವಾದ ಭ್ರಷ್ಟಾಚಾರ, ಅವ್ಯವಹಾರ ಮತ್ತು ಎಲಿಜಿಬಲ್ ಇಲ್ಲದ ಅನರ್ಹ ಅಭ್ಯರ್ಥಿಗಳನ್ನು ರೀಡರ್ ಮತ್ತು ಪ್ರೊಫೆಸರ್ ಹುದ್ದೆಗಳಿಗೆ ಆಯ್ಕೆ ಮಾಡಲಾಗಿದೆ. ಹಿಂದುಳಿದ ವರ್ಗ ಅರ್ಹ ಅಭ್ಯರ್ಥಿಗಳು ಇದ್ದಾಗಲೂ ಕೂಡ ಅದನ್ನು ಸಾಮಾನ್ಯ ವರ್ಗಕ್ಕೆ ತಿದ್ದುಪಡಿ ಮಾಡಿ ಕಾನೂನು ಉಲ್ಲಂಘನೆಯಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಮತ್ತು ಕಳೆದ ಅಧಿವೇಶನದಲ್ಲಿ ಈ ಬಗ್ಗೆ ಸಾಕಷ್ಟು ಚರ್ಚೆಯಾಗಿ ಈ ಬಗ್ಗೆ ವಿಚಾರಣೆಯಾಗಬೇಕೆಂಬುದನ್ನು ತಿಳಿಸಿದ್ದರು. ದಿ: 25.3.2006 ಮತ್ತು 19.4.2007ರ ಈ ಎರಡು ನೇಮಕಾತಿಗಳಾಗಿ ಒಂದೂವರೆ ವರ್ಷಗಳು ಕಳೆದಿದ್ದರು ಕೂಡ ಯಾವುದೇ ರೀತಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ. ಆದುದರಿಂದ ಮಾನ್ಯ ಸಚಿವರು, ಕಾನೂನು ಬಾಹಿರವಾಗಿರುವ ಈ ನೇಮಕಾತಿಯನ್ನು ರದ್ದು ಮಾಡಬೇಕು ಮತ್ತು ಯಾರು ಇದರಲ್ಲಿ ಭಾಗಿಗಳಾಗಿದ್ದಾರೆ ಅವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಡಾ॥ ಹೆಚ್.ಸಿ. ಮಹಾದೇವಪ್ಪ: ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆದಂಥ ಉಪನ್ಯಾಸಕರ ಆಯ್ಕೆಯ ವಿಷಯದಲ್ಲಿ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಲಾಗಿತ್ತು. ನಾನು, ಮಾಧುಸ್ವಾಮಿ, ಸಿದ್ದರಾಮಯ್ಯನವರು ಸೇರಿದಂತೆ ಅನೇಕ ಸದಸ್ಯರು ಮಾತನಾಡಿದ್ದೇವೆ. ಅಲ್ಲಿ ಆಗಿರುವುದು, ಸುಪ್ರೀಂ ಕೋರ್ಟ್‌ನ ಆದೇಶ ಉಲ್ಲಂಘನೆಯಾಗಿದೆ, ರಾಜ್ಯಾಂಗದ ಉಲ್ಲಂಘನೆಯಾಗಿದೆ, ಸೀನಿಯಾರಿಟಿ ಉಲ್ಲಂಘನೆಯಾಗಿದೆ ಮತ್ತು ರೋಸ್ಟರ್ ಉಲ್ಲಂಘನೆಯಾಗಿದೆ. ಈ ಎಲ್ಲಾ ಉಲ್ಲಂಘನೆಯನ್ನು ಮಾಡಿ ಯಾರು ಅರ್ಹರಿಲ್ಲವೋ ಯಾರಿಗೆ ಎಲಿಜಿಬಿಲಿಟಿ ಇಲ್ಲವೋ ಅಂಥವರನ್ನು ಆಯ್ಕೆ ಮಾಡಿ ಅವರು ಸ್ವಜನಪಕ್ಷಪಾತದಿಂದ, ಭ್ರಷ್ಟಾಚಾರದಿಂದ ಆ ಇಡೀ ವಿಶ್ವವಿದ್ಯಾನಿಲಯದಲ್ಲಿ ಆ ಕಾರ್ಯ ನಡೆದಿದೆ ಎಂದು ಇಲ್ಲಿ ವ್ಯಾಪಕವಾಗಿ ಚರ್ಚೆ ನಡೆದಿತ್ತು ಎಂಬುದು ಹಿಂದೆ ಸದಸ್ಯರಾಗಿದ್ದ ಮಾನ್ಯ ಸಚಿವರಿಗೂ ಗೊತ್ತಿದೆ. ಹಿಂದಿನ ಉನ್ನತ ಶಿಕ್ಷಣ ಸಚಿವರು ಈ ಬಗ್ಗೆ ಸಮಗ್ರವಾದ ತನಿಖೆಯನ್ನು ನಡೆಸಿ, ಏನು ಸುಪ್ರೀಂ ಕೋರ್ಟ್‌ನ ಆದೇಶ ಉಲ್ಲಂಘನೆಯಾಗಿದೆ. ರೊಸ್ಟರ್ ಉಲ್ಲಂಘನೆಯಗಿದೆ, ರಾಜ್ಯಾಂಗದ ಉಲ್ಲಂಘನೆಯಾಗಿದೆ ಮತ್ತು ineligible ಅಭ್ಯರ್ಥಿಗಳನ್ನು ಆಯ್ಕೆಮಾಡಿರುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುತ್ತೇವೆ, ತಪ್ಪನ್ನು ಸರಿಪಡಿಸುತ್ತೇವೆಂದು ಹೇಳಿದ್ದರು

ಮತ್ತೆ ಅದಕ್ಕೆ ಸಮಗ್ರವಾದ ತನಿಖೆಯನ್ನು ನಡೆಸಿ ಎಂದು ನಾವು ಒತ್ತಾಯ ಮಾಡಿದ್ದೆವು. ಹಿಂದಿನ ಸರ್ಕಾರದಲ್ಲಿ ಉನ್ನತ ಶಿಕ್ಷಣ ಸಚಿವರಾಗಿದ್ದ ಮಾನ್ಯ ಶಂಕರ ಮೂರ್ತಿಯವರು ಈ ಸದನದಲ್ಲಿ ಹೇಳಿದ್ದಾರೆ. ಸನ್ಮಾನ್ಯ ಮಂತ್ರಿಗಳು ಮತ್ತು ಸರ್ಕಾರ ಈ ಬಗ್ಗೆ ಕೂಲಂಕುಶವಾದ ತನಿಖೆಯನ್ನು ನಡೆಸಿ ತಪ್ಪಿರಸ್ಥರಿಗೆ ಶಿಕ್ಷೆ ಕೊಡುವುದರ ಜೊತೆಗೆ ಆಗಿರುವ ಅವ್ಯವಹಾರಗಳನ್ನು ಸರಿಪಡಿಸಿ, ಅಲ್ಲಿ ನಿಜವಾದ ಅರ್ಹರಿಗೇನು ತೊಂದರೆಯಾಗಿದೆ ಅದನ್ನು ಸರಿಪಡಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಹಿಂದೆ ಸದಸ್ಯರಾಗಿದ್ದ ವಿಶ್ವೇಶ್ವರ ಹೆಗ್ಗಡೆ ಕಾಗೇರಿಯವರು ಇಲ್ಲೇ ಇದ್ದರು ಶಂಕರಮೂರ್ತಿಯವರು ಸಚಿವರಾಗಿದ್ದಾಗ ಬಹಳ ಬಿಸಿಯಾಗಿ ಚರ್ಚೆಯಾಯಿತು. ಆಗಲೂ ಧ್ರುವನಾರಾಯಣ್ ಅವರೇ ಪ್ರಸ್ತಾಪ ಮಾಡಿದರು, ನಾನು ಮಾಧುಸ್ವಾಮಿ ಮತ್ತು ಮಹಾದೇವಪ್ಪನವರು ಚರ್ಚೆಯಲ್ಲಿ ಭಾಗವಹಿಸಿದ್ದೂ ಬಹಳ ಧೀರ್ಘವಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಕ್ಷಪಾತವಾಗಿದೆ, ಭ್ರಷ್ಟಾಚಾರವಾಗಿದೆ ಎಂದು ಚರ್ಚೆ ನಡೆದಿತ್ತು. ಅದಕ್ಕಿಂತ ಬಹಳ ಮುಖ್ಯವಾಗಿ ಮೀಸಲಾತಿ ಉಲ್ಲಂಘನೆಯಾಗಿದೆ. ಯಾರು ಹಿಂದುಳಿದವರಿಗೆ, ಎಸ್.ಸಿ/ಎಸ್.ಟಿ ಯವರಿಗೆ ಕೊಡಬೇಕಾಗಿತ್ತು ಅವರಿಗೆ ಬಿಟ್ಟು, ನ್ಯಾಯಾಲಯದ ಆದೇಶವಿದ್ದರೂ ಕೂಡ ಅದನ್ನು ಉಲ್ಲಂಘನೆ ಮಾಡಿ ಮೀಸಲಾತಿ ಉಲ್ಲಂಘನೆ ಮಾಡಿ ಸುಪ್ರೀಂ ಕೋರ್ಟಿನ ಆದೇಶದ ಉಲ್ಲಂಘನೆ ಇವೆಲ್ಲ ಮಾಡಿ ಯಾರೋ ತಮ್ಮ ಸ್ವಜಾತಿಯವರಿಗೆ ಕೊಡಬೇಕು, ಅವರಿಗೆ ಬೇಕಾದವರಿಗೆ ಕೊಡಬೇಕು ಎಂದು ಇಷ್ಟೊಂದು ಕಾನೂನು ಬಾಹಿರವಾದ ಕ್ರಮಗಳಾಗಿದ್ದರೂ ಕೂಡ, ಇವತ್ತು ನಾವಿನ್ನು ಪರಿಶೀಲನೆ ಮಾಡುತ್ತಿದ್ದೇವೆ, ಸಮಗ್ರವಾಗಿ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿಕೆ ಕೊಡುತ್ತಿದ್ದಾರೆ ನನಗೆ ಅರ್ಥವಾಗುತ್ತಿಲ್ಲ. ಇದರ ಬಗ್ಗೆ ಹಿಂದೆ ಸರ್ಕಾರ ಹೇಳಿದ್ದ ಹೇಳಿಕೆಗೂ ಇವತ್ತು ಹೇಳುತ್ತಿರುವುದಕ್ಕೂ ಆಗಲೇ ಡೈಲೂಟ್ ಆಗಿದೆ. ಇಲ್ಲಿ ಚರ್ಚೆಯಾದಾಗ ಬಹಳ ದೊಡ್ಡ ಗಲಾಟೆಯಾಯಿತು. ಅಲ್ಲಿ ಶಂಕರಮೂರ್ತಿಯವರು ಕುಳಿತುಕೊಂಡು ಮಾಡೇ ಮಾಡುತ್ತೇವೆಂದು ಹೇಳಿದರು, ನಿಮಗೂ ಗೊತ್ತಿದೆ, ಇವತ್ತಿನವರೆಗೆ ನೇಮಕಾತಿಯನ್ನು ರದ್ದುಮಾಡಿದ್ದೀರೋ? ಆವತ್ತಿನಿಂದ ಇವತ್ತಿನವರೆಗೆ what are the steps that you have taken ಅವತ್ತು ಆ ಹುದ್ದೆಗಳನ್ನು ರದ್ದು ಮಾಡಿ ಎಂದು ಹೇಳಿದ್ದೆವು. ಈಗ IIIlegal ಆಗಿ ಅಪಾಯಿಂಟ್ ಆಗಿರುವವರು ಕೆಲಸ ಮಾಡಿಕೊಂಡು ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಸರ್ಕಾರದ ಹಣ ಅದು. ನಿಯಮ ಉಲ್ಲಂಘನೆ ಮಾಡಿ ಕೆಲಸ ಕೊಟ್ಟರೂ ಕೂಡ ನೀವು ಸುಮ್ಮನೆ ಕುಳಿತುಕೊಂಡರೆ ಸರ್ಕಾರದ ಹಣ ಹೇಗೆ ಬೇಕಾದರೂ

ಮನಸೋ ಇಚ್ಛೆ ಲೂಟಿ ಮಾಡಬಹುದೇ, ಅವರಿಗೆ ಇಷ್ಟ ಬಂದ ಹಾಗೆ ಖರ್ಚು ಮಾಡಬಹುದೇ? ನೀವು ಇದುವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ನೋಟಿಸ್ ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ. ನೋಟೀಸ್ ಕೊಟ್ಟಿರುವುದು ಬಿಟ್ಟರೆ, ನಾವು ಅವತ್ತು ಮಾನ್ಯ ಶಂಕರಮೂರ್ತಿಯವರಿಗೆ ಒತ್ತಾಯ ಮಾಡಿದ್ದು ಈಗ ಮಾಡಿರತಕ್ಕಂತಹ recruitment ಏನಿದೆ ಅದು ಕಾನೂನು ಬಾಹಿರವಾಗಿರುವುದರಿಂದ ಮೀಸಲಾತಿಯ ಉಲ್ಲಂಘನೆ ಆಗಿರುವುದರಿಂದ, ನ್ಯಾಯಾಲಯದ ಆದೇಶ ಉಲ್ಲಂಘನೆ ಆಗಿರುವುದರಿಂದ ಪಕ್ಷಪಾತ ನಡೆದಿರುವುದರಿಂದ, ಭ್ರಷ್ಟಾಚಾರ ನಡೆದಿರುವುದರಿಂದ ಅದನ್ನು ರದ್ದು ಮಾಡಿ ಎಂದು ಹೇಳಿದ್ದೆವು. ಇವತ್ತಿನವರೆಗೂ ರದ್ದು ಮಾಡಿಲ್ಲ. ಅವರು ಕೆಲಸಕ್ಕೆ ಹೋಗುತ್ತಲೇ ಇದ್ದಾರೆ. ಯಾರು ಅರ್ಹರಲ್ಲವೋ ಅವರಿಗೆಲ್ಲಾ ಕೆಲಸ ಸಿಕ್ಕಿದೆ. ಸರ್ಕಾರ ಏನು ಮಾಡುತ್ತಿದೆ. ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳುವುದಕ್ಕಾ ಸರ್ಕಾರ ಇರುವುದು? ಇವತ್ತು ನೀವು ನಮ್ಮ ಸರ್ಕಾರ ಇದೆ ಎಂದು ಹೇಳಬಹುದು. ಅವತ್ತು ನಿಮ್ಮವರೇ ಇದ್ದರಲ್ಲಾ ಏಳೆಂಟು ತಿಂಗಳುಗಳಾದವು. ಏಳೆಂಟು ತಿಂಗಳುಗಳಿಂದ ಕ್ರಮ ಜರುಗಿಸಿಲ್ಲ. ಏಳೆಂಟು ತಿಂಗಳುಗಳಿಂದ ಕ್ರಮ ಜರುಗಿಸಿಲ್ಲವೆಂದರೆ ನಿಮ್ಮ ಸರ್ಕಾರ ನಿದ್ದೆ ಮಾಡುವುದಕ್ಕಾ ಇರುವುದು? ಇಲ್ಲಿ ಸುಮ್ಮಸುಮ್ಮನೆ ಹುಡುಗಾಟಕ್ಕೆ ಕೇಳುತ್ತೇವೆಯೇ? ಇಂತಹ ವಿಚಾರದಲ್ಲಿ ಗಂಭೀರವಾಗಿ ಕ್ರಮ ತೆಗೆದುಕೊಳ್ಳದೇ ಹೋದರೆ, ಬೇರೆ ಎಲ್ಲಾ ಕಡೆ ನಡೆಯುವುದಕ್ಕೆ ಪ್ರಾರಂಭವಾಗುತ್ತದೆ. ಬಿಜಾಪುರದ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಏನು ಮಾಡಿದಿರಿ? ದಿನಾ ಗಲಾಟೆ. ಏಕೆಂದರೆ ಪಾಪ ಪೂರ್ ಲೇಡಿ. ವೈಸ್‌ಛಾನ್ಸಲರ್ ಆಗಿದ್ದಾಗ ಎಷ್ಟು ಗಲಾಟೆ ಮಾಡಿದಿರಿ. ಸಿ.ಟಿ. ರವಿಯವರೇ ನಿಮ್ಮವರೆಲ್ಲಾ ಹೋಗಿ ಎಷ್ಟು ಗಲಾಟೆ ಮಾಡಿದರು. ಯಾರು ಗಟ್ಟಿ ಇರುತ್ತಾರೆ ಅವರಿಗೆ ಬಿಟ್ಟು ಬಿಡುವುದು. ಯಾರು ದುರ್ಬಲರಾಗಿದ್ದಾರೆ ಅವರ ಮೇಲೆ ಬಿದ್ದು ಬಿಡುವುದು. What is this? ಅವರ ಮೈ ಮೇಲೆ ಬಿದ್ದು ಪಾಪ ಅವರಿಗೆ ವಜಾ ಮಾಡಿದರು. ಇವರ ಮೇಲೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಅದೇ ಅಳತೆಗೋಲಿನಲ್ಲಿ ಇವರನ್ನೂ ಅಳೆಯಬೇಕಲ್ಲ. ಅವರಿಗೆ ಬೇರೆ ಅಳತೆಗೋಲು, ಇವರಿಗೆ ಬೇರೆ ಅಳತೆಗೋಲು ಮಾಡುತ್ತೀರಾ? ದಯವಿಟ್ಟು ಕೂಡಲೇ ಆ ಮಾಹಿತಿಯನ್ನು ತರಿಸಿಕೊಂಡು ಆ ಹುದ್ದೆಗಳನ್ನು ರದ್ದು ಮಾಡಬೇಕು. ಮಾಹಿತಿಯನ್ನು ತರಿಸಿ ಸಮಗ್ರವಾಗಿ ತನಿಖೆ ಮಾಡಿ ಯಾರು ಕಾರಣ ಕರ್ತರು ಕಾನೂನಿನ ಉಲ್ಲಂಘನೆ ಯಾರು ಮಾಡಿದ್ದಾರೆ ಅವರ ಮೇಲೆ ಕಠಿಣವಾದ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಎಲ್ಲಾ ಯೂನಿವರ್ಸಿಟಿಗಳವರೂ ಇದನ್ನೇ ಪ್ರಾರಂಭ ಮಾಡುತ್ತಾರೆ. ನಮ್ಮವು ಅಟಾನಮಸ್ ಬಾಡಿಗಳು, ಯಾರೂ ಇಂಟರ್‌ಫೀಯರ್ ಆಗಬಾರದು,

ಸರ್ಕಾರದ ಹಣ ಅಟಾನಮಸ್ಸಾ? ಅವರೇ ಸಂಪನ್ಮೂಲಗಳನ್ನು ಕ್ರೋಡೀಕರಣ ಮಾಡಿಕೊಂಡಿದ್ದಾರಾ? ನಾವು ಇಲ್ಲಿ ಪಾಸ್ ಮಾಡಿ ಕೊಡುವುದು. ನೀವು ಪಾಸ್ ಮಾಡಿಕೊಡತಕ್ಕಂತಹ ಹಣವನ್ನು ಅವರು ಖರ್ಚು ಮಾಡುವುದು. ಅವರ ಹಣ ಅಲ್ಲ. ಯೂನಿವರ್ಸಿಟಿಯಲ್ಲಿ ಉತ್ಪತ್ತಿ ಆಗಿರತಕ್ಕಂತಹ ಹಣ ಅಲ್ಲ. ಇಲ್ಲಿ ನಾವು ಪಾಸ್ ಮಾಡಿ ಕೊಡುತ್ತೇವೆ. ನಾಳೆ Education Department demand ಪಾಸ್ ಮಾಡಿ ಕೊಡುತ್ತೇವಲ್ಲ, ಆ ಹಣ ಎಲ್ಲಾ ಅಲ್ಲಿ ಖರ್ಚಾಗುವುದಿಲ್ಲವೇ? ಹಣ ಕೊಟ್ಟು ಸುಮ್ಮನೆ ಕುಳಿತುಕೊಳ್ಳುವುದಕ್ಕಾ? ದಯವಿಟ್ಟು ಮಾನ್ಯ ಅಧ್ಯಕ್ಷರೆ, ನಿಮ್ಮ ಮೂಲಕ ನಾನು ಒತ್ತಾಯ ಮಾಡುತ್ತೇನೆ, ಕೂಡಲೇ ಆ ಹುದ್ದೆಗಳನ್ನು ರದ್ದು ಮಾಡಿ ಅವರ ಮೇಲೆ ಕಠಿಣವಾದ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರುಗಳು ಏನು ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ, ಬಹಳ ಗಂಭೀರವಾದ ವಿಷಯಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದು ನಮ್ಮ ಎಲ್ಲಾ ತನಿಖೆಗಳಿಂದಲೂ ಸತ್ಯ ಎಂದು ಸಾಬೀತಾಗಿದೆ. ಕ್ರಮ ತೆಗೆದುಕೊಳ್ಳಬೇಕಾಗಿತ್ತು. ವಿಳಂಬವಾಗಿದೆ. ಆದರೆ ಅದಕ್ಕೆ ನಮ್ಮ ಸರ್ಕಾರಗಳು ಕಾರಣವಲ್ಲವೆಂದು ನಮಗೆ ನಿಮಗೆ ಗೊತ್ತಿದೆ. ರಾಜ್ಯಪಾಲರ ಅಧಿಕಾರದ ಅವಧಿಯೊಳಗೆ ಇದು ಆಗಬೇಕಿತ್ತು. ಆ ಸಂದರ್ಭದಲ್ಲಿ ನಿರ್ಣಯಗಳು ಆಗುತ್ತವೆ ಎಂದು ನಮ್ಮೆಲ್ಲರ ಅಪೇಕ್ಷೆ ಇತ್ತು. ಏಕೆಂದರೆ ಶ್ರೀಯುತ ಶಂಕರಮೂರ್ತಿಯವರು ಮಂತ್ರಿಗಳಾಗಿ ಈ ಸದನದಲ್ಲಿ ಜವಾಬ್ದಾರಿಯುತವಾಗಿ ಉತ್ತರವನ್ನು ಕೊಟ್ಟು, ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದರು ಅದರ ಆಧಾರದ ಮೇಲೆ ಪ್ರೊಫೆಸರ್ಸ್, ರೀಡರ್ಸ್ ಮತ್ತು ಲೆಕ್ಚರರ್ಸ್ ಈ ಎಲ್ಲಾ ಹುದ್ದೆಗಳು ಸುಮಾರು 200ಕ್ಕಿಂತ ಹೆಚ್ಚಿನ ಹುದ್ದೆಗಳು ಯಾವುದೇ ನಿಯಮಾವಳಿಗಳನ್ನು ಕಾನೂನಿನ ಅಂಶಗಳನ್ನು ಪಾಲಿಸದೆ ನೇಮಕಾತಿಗಳಾಗಿವೆ ಎಂದು ಅಲ್ಲಿಯ ಸಿಂಡಿಕೇಟ್‌ನವರೂ ಒಪ್ಪಿಕೊಂಡಿದ್ದಾರೆ. ರಾಜ್ಯಪಾಲರ ಆಡಳಿತದ ಸಂದರ್ಭದಲ್ಲಿ ಕ್ರಮ ಆಗಬೇಕಾಗಿತ್ತು.

ಶ್ರೀ ಸಿದ್ದರಾಮಯ್ಯ: ಒಬ್ಬರಿಗೆ ರೀಡರ್ ಆಗುವ ಅರ್ಹತೆಯೇ ಇಲ್ಲ. ಅವರು Ordinary Lecturer ಬೆಂಗಳೂರು ಯೂನಿವರ್ಸಿಟಿಗೆ ರೀಡರ್ ಮಾಡಿ ಕಳುಹಿಸಿದ್ದಾರೆ. ಅಲ್ಲಿಂದ ಕರೆದುಕೊಂಡು ಬಂದು ಇಲ್ಲಿ ಪ್ರೊಫೆಸರ್ ಹುದ್ದೆ ಕೊಡುತ್ತಾರೆ. ಇದು ಯಾವುದಾದರೂ ಯೂನಿವರ್ಸಿಟಿಯಲ್ಲಿ ನಡೆದಿದೆಯೇ? ಇದೆಲ್ಲಾ ಚರ್ಚೆಯಾಗಿದೆ. you

please spell out ಎಷ್ಟು ದಿನದಲ್ಲಿ ಕ್ರಮ ತೆಗೆದುಕೊಳ್ಳುತ್ತೀರಿ? ಯಾವಾಗ ತೆಗೆದುಕೊಳ್ಳುತ್ತೀರಿ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಬಹಳ ಗಂಭೀರವಾದ ವಿಷಯವನ್ನು ಚರ್ಚೆ ಮಾಡಿರುವುದನ್ನು ನಾನು ಉನ್ನತ ಶಿಕ್ಷಣ ಸಚಿವರ ಜೊತೆಯಲ್ಲಿ ಮಾತನಾಡಿ ವಿಷಯದ ಗಂಭೀರತೆಯನ್ನು ತಿಳಿಸಿ. ನೀವು ಯಾವ ಭಾವನೆಗಳಲ್ಲಿ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೀರಿ, ಆ ಗಂಭೀರತೆಯನ್ನು ಸಹ ಅವರಿಗೆ ತಿಳಿಸಿ, ತಕ್ಷಣದಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಆ ದಿಕ್ಕಿನಲ್ಲಿ ನಾವು ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ:–You please come out with replay. ಆ ಹುದ್ದೆಗಳನ್ನಾದರೂ ರದ್ದು ಮಾಡುತ್ತೇವೆಂದು ಹೇಳಿ. ರಾಷ್ಟ್ರಪತಿಗಳ ಆಡಳಿತ ಬಿಟ್ಟು ಬಿಡಿ ನೀವು ಹೇಳಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ವಿಷಯ ತುಂಬಾ ಗಂಭೀರವಾಗಿದೆ, ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದಲ್ಲಿ ಹೇಳಬೇಕು.

ಡಾ॥ ಹೆಚ್.ಸಿ. ಮಹಾದೇವಪ್ಪ:– ಮಾನ್ಯ ಅಧ್ಯಕ್ಷರೆ, ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. ಮಾನ್ಯ ಸಚಿವರು ಎಲ್ಲಾ ತನಿಖೆಗಳಿಂದ ತಪ್ಪಾಗಿದೆ, ಸುಮಾರು 200ಕ್ಕೂ ಹೆಚ್ಚು ಪ್ರೊಫೆಸರ್ ಮತ್ತು ರೀಡರ್ ಹುದ್ದೆಗಳನ್ನು ಕಾನೂನು ಬಾಹಿರವಾಗಿ ಆಯ್ಕೆ ಮಾಡಿದ್ದಾರೆಂದು ತನಿಖೆಯಿಂದ ಗೊತ್ತಾಗಿದೆ. ಸಿಂಡಿಕೇಟ್ ಸಭೆ ಕೂಡ ಹೇಳಿದೆ ಎಂದು ಹೇಳಿದ ಮೇಲೆ ಇಮ್ಮಿಡಿಯಟ್‌ಲಿ ಆ ಎಲ್ಲಾ ಆಯ್ಕೆಗಳನ್ನು ರದ್ದು ಮಾಡಿ. ರದ್ದು ಮಾಡಿ ಆದ ಮೇಲೆ ತನಿಖೆ ಮಾಡಿಸಿ. ತನಿಖೆ ಮಾಡಿಸುವುದರ ಜೊತೆಗೆ ಯುಜಿಸಿ ಗೈಡ್‌ಲೈನ್ಸ್ ಏನಿದೆ, supreme Court direction ಏನು ಇದೆ, ಮಾನ್ಯ ಮುಖ್ಯಮಂತ್ರಿಗಳೂ ಇಲ್ಲಿಯೇ ಇದ್ದಾರೆ. ಅವರೂ ಕೂಡ ಸದನದಲ್ಲಿ ಇಲ್ಲಿಯೇ ಇದ್ದರು. ದಯಮಾಡಿ ಸರ್ಕಾರದ ನಿಲುವನ್ನು ಸ್ಪಷ್ಟವಾಗಿ ಹೇಳಬೇಕು. ನಾವು ಚರ್ಚೆ ಮಾಡಿ ಅವರನ್ನು consult ಮಾಡಿ ತೆಗೆದುಕೊಂಡು ಬರುತ್ತೇವೆಂದು ಹೇಳಿದ್ದರಿಂದ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇರುವುದರಿಂದ ಸರ್ಕಾರ ನಿರ್ಧಾರವನ್ನು ಪ್ರಕಟಮಾಡಬೇಕು.

ಶ್ರೀ ಆರ್. ಧ್ರುವನಾರಾಯಣ: ಇಂಥದ್ದೆ ಪ್ರಸಂಗ ಬಿಜಾಪುರ ಕಾನೂನು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯಗಳಲ್ಲಿ ಬಂದಂತಹ

ಸಂದರ್ಭದಲ್ಲಿ ಕಾನೂನು ಬಾಹಿರವಾಗಿ ಆಯ್ಕೆಯಾದ ಹುದ್ದೆಗಳನ್ನು ರದ್ದು ಮಾಡಿರುವಂತಹ ನಿದರ್ಶನಗಳೂ ಕೂಡ ಇವೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ಅವರ ತನಿಖೆ ಪ್ರಕಾರ ಒಪ್ಪಿಕೊಂಡಿದ್ದಾರೆ. ಅವರ ಹೇಳಿಕೆಯಲ್ಲಿ ಆ ಹುದ್ದೆಗಳನ್ನು ರದ್ದು ಮಾಡುತ್ತೇವೆಂದು ದಯಮಾಡಿ ಹೇಳಿ ಬಿಡಲಿ.

ಅಧ್ಯಕ್ಷರು:– ಅವರು ಪ್ರೊಸೀಜರ್ ಪ್ರಕಾರ ಮಾಡಬೇಕು. ಮಾಡಲಿಕ್ಕೆ ಒಪ್ಪಿಕೊಂಡಿದ್ದಾರೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ನಿಮ್ಮ ಗಮನ ಸೆಳೆಯುತ್ತಿದ್ದೇನೆ. ಇದರಲ್ಲಿ ಮಿತಿ ಮೀರಿ ಕಾನೂನಿನ ಉಲ್ಲಂಘನೆ ಆಗಿದೆ. ಸ್ವಲ್ಪ ಡೀವಿಯೇಷನ್ ಆಗಿದೆ ಎಂದರೆ ಸುಮ್ಮನೆ ಇದ್ದು ಬಿಡಬಹುದಾಗಿತ್ತು. ನೀವು ವರದಿ ತರಸಿ ನೋಡಿ. ವರದಿ ತರಿಸಿ ದಯವಿಟ್ಟು ಆ ಹುದ್ದೆಗಳನ್ನು ರದ್ದು ಮಾಡಿ. ಇಲ್ಲದಿದ್ದರೆ ಬಹಳ ಜನರಿಗೆ ಹಿಂದುಳಿದವರಿಗೆ ಮತ್ತು ದಲಿತರಿಗೆ ಬಹಳ ಅನ್ಯಾಯವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಇವತ್ತೇ ಫೈಲ್ ತರಿಸಿ ನೋಡಿ ಅದರ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಂಡು ಅನ್ಯಾಯವಾಗಿದ್ದರೆ ನಿಶ್ಚಿತವಾಗಿ ಕ್ರಮ ತೆಗೆದುಕೊಳ್ಳುತ್ತೇನೆ. ಫೈಲ್ ತರಿಸಿಕೊಳ್ಳುತ್ತೇನೆ, ನೋಡುತ್ತೇನೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೆನೆ. ನಂತರ I will come back. I will assure you.

ಅಧ್ಯಕ್ಷರು:– ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನ ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಯಿತು)